**ಸುಬೋಧ್ ಯಾದವ್,** ಭಾ.ಆ.ಸೇ.,

**ವ್ಯವಸ್ಥಾಪಕರ ನಿರ್ದೇಶಕರು**

**ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ**

**2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಬೆಂಗಳೂರು ಜಿಲ್ಲೆ,**
**ಕೆಂಪೇಗೌಡ ರಸ್ತೆ, ಬೆಂಗಳೂರು – 560 009.**

**ಅ.ಸ.ಪತ್ರ.ಸಂ:ಕೆಪಿಎಲ್‌ಸಿ/ಆಡಳಿತ/ಸಿಆರ್/8/15-16** **ದಿನಾಂಕ:03-06-2015**

ಮಾನ್ಯರೇ

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಕಾರ್ಯಭಾರವನ್ನು ನಾನು ಈಗಾಗಲೇ ವಹಿಸಿಕೊಂಡಿರುತ್ತೇನೆ.

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವು ಸರ್ಕಾರಿ ಸ್ವಾಮ್ಯದ ನಿಗಮವಾಗಿದ್ದು, ಇದು ಸರ್ಕಾರಿ/ಶಾಸನಾತ್ಮಕ ಸಂಸ್ಥೆಗಳಿಗೆ ಸೇರಿದ ಜಮೀನುಗಳ ವ್ಯವಹರಣೆ ಮಾಡುವುದು, ಅಭಿವೃದ್ಧಿಪಡಿಸಿ ಉಪಯುಕ್ತವಾಗಿ ಬಳಸುವುದು ನಿಗಮದ ಮುಖ್ಯ ಧ್ಯೇಯೊದ್ಧೇಶಗಳಾಗಿರುತ್ತವೆ. ರಾಜ್ಯದ ಸರ್ಕಾರಿ ಜಮೀನುಗಳ ಒತ್ತುವರಿ ಹಾಗೂ ಒತ್ತುವರಿಯಿಂದ ಹಿಂಪಡೆದ ಜಮೀನುಗಳ ಮಾಹಿತಿ ಸಂಗ್ರಹಿಸುವುದರ ಮೂಲಕ ಸರ್ಕಾರಿ ಜಮೀನು ದತ್ತಾಂಶ ಕ್ರೋಢೀಕರಣ, ಒತ್ತುವರಿಯಿಂದ ಹಿಂಪಡೆದ ಜಮೀನುಗಳನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡುವುದು, ಹಾಗೂ ಒತ್ತುವರಿಯಾಗದಂತೆ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ನಿಗಮವು ಸರ್ಕಾರ ಮತ್ತು ಜಿಲ್ಲಾಡಳಿತದ ನಡುವೆ ಸಮನ್ವಯ ಪ್ರಾಧಿಕಾರವಾಗಿ ಕರ್ತವ್ಯ ನಿರ್ವಹಿಸುತ್ತಿದೆ. ಈ ಧ್ಯೇಯೊದ್ಧೇಶಗಳನ್ವಯ ರಾಜ್ಯದ ಸರ್ಕಾರಿ ಜಮೀನುಗಳ ಒತ್ತುವರಿ ಗುರುತಿಸುವುದು, ಒತ್ತುವರಿ ತೆರವುಗೊಳಿಸುವುದು, ಒತ್ತುವರಿಯಿಂದ ಹಿಂಪಡೆದ ಜಮೀನುಗಳನ್ನು ರಕ್ಷಿಸುವುದು, ತದನಂತರ ಅಭಿವೃದ್ಧಿಪಡಿಸುವುದು ಹಾಗೂ ಸರ್ಕಾರಕ್ಕೆ ರಾಜಸ್ವ ಉತ್ಪತ್ತಿಯಾಗುವಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಈ ನಿಗಮದ ಜವಾಬ್ದಾರಿಯಾಗಿದೆ.

ಒತ್ತುವರಿ ಗುರುತಿಸುವುದು ಹಾಗೂ ತೆರವುಗೊಳಿಸುವ ಪ್ರಕ್ರಿಯೆಗಳನ್ನು ಕ್ಷೇತ್ರ ಮಟ್ಟದಲ್ಲಿ ನಿರ್ವಹಿಸಲಾಗುತ್ತಿದ್ದೂ ಈ ನಿಗಮವು ಈ ನಿಟ್ಟಿನಲ್ಲಿ ಮೇಲ್ವಿಚಾರಣಾ ಕಾರ್ಯ ನಿರ್ವಹಿಸುತ್ತಿದೆ. ಅಲ್ಲದೇ ತೆರವುಗೊಳಿಸಿದ ಜಮೀನುಗಳ ಮಾಹಿತಿಗಳನ್ನು ಸಂಗ್ರಹಿಸಿ ಈ ಮಾಹಿತಿಗಳನ್ನು ಸರ್ಕಾರಕ್ಕೆ ಮತ್ತು ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸುವ ಜವಾಬ್ದಾರಿಯುತ ಕಾರ್ಯವನ್ನು ಈ ನಿಗಮವು ನಿರ್ವಹಿಸುತ್ತಿದೆ. ರಾಜ್ಯದಲ್ಲಿ ಒತ್ತುವರಿ ತೆರವುಗೊಳಿಸುವ ಕಾರ್ಯವನ್ನು ಚುರುಕುಗೊಳಿಸುವ ಸಲುವಾಗಿ ರಾಜ್ಯದ್ಯಂತ 4.38 ಲಕ್ಷ ಎಕರೆ ಜಮೀನುಗಳಿಗೆ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ಅದನ್ನು ಅನುಷ್ಠಾನಗೊಳಿಸಲಾಗುತ್ತಿದೆ ಕ್ರಿಯಾಯೋಜನೆಯಂತೆ ಈಗಾಗಲೇ 1.19 ಲಕ್ಷ ಎಕರೆ ತೆರವುಗೊಳಿಸಿದೆ. ಅಲ್ಲದೇ ಒತ್ತುವರಿಯಿಂದ ತೆರವುಗೊಳಿಸಿದ ಜಮೀನುಗಳನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿಯೂ ಸಹ ಕ್ರಮ ಕೈಗೊಳ್ಳಬೇಕಾಗಿದೆ. ಇದಕ್ಕಾಗಿ ಜಿಲ್ಲಾಡಳಿತದ ಸಹಕಾರವು ಈ ನಿಗಮಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುತ್ತದೆ. ಈ ಅಂಶಗಳನ್ನು ತಮ್ಮ ಜಿಲ್ಲೆಯ ಕೆಳಹಂತದ ಅಧಿಕಾರಿಗಳೊಂದಿಗೆ ಸಮನ್ವಯಗೊಳಿಸಲು ಕೋರಿದೆ.

ಈ ನಿಗಮದ ದ್ಯೇಯೋದ್ದೇಶಗಳನ್ವಯ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ತಮ್ಮಗಳ ಸಹಕಾರವನ್ನು ನಿಗಮವು ಅಪೇಕ್ಷಿಸುತ್ತದೆ. ರಾಜ್ಯಾದ್ಯಂತ ಸರ್ಕಾರಿ ಜಮೀನುಗಳ ಒತ್ತುವರಿಯನ್ನು ಗುರ್ತಿಸಿ, ತೆರವುಗೊಳಿಸುವ ಹಾಗೂ ಈ ಎಲ್ಲಾ ಮಾಹಿತಿಗಳನ್ನು ಈ ನಿಗಮದ ಮೂಲಕ ಸರ್ಕಾರಕ್ಕೆ ಸಲ್ಲಿಸುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸಲು ನೀವು ಈ ನಿಗಮದೊಂದಿಗೆ ಕೈಜೋಡಿಸಲು ಮತ್ತೊಮ್ಮೆ ಕೋರಲಾಗಿದೆ.

**ವಂದನೆಗಳೊಂದಿಗೆ**

ತಮ್ಮ

3.6.15.

ರವರಿಗೆ,
**ಎಲ್ಲಾ ಜಿಲ್ಲಾಧಿಕಾರಿಗಳಿಗೆ,**